**ಸಾಕ್ಷಿಗೆ ದಿನಾಂಕ 03.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀಮತಿ ಟಿ ಜೆ ಪಿ ವಕೀಲರಿಂದಃ

1. ನಾನು ಈ ಪ್ರಕರಣದಲ್ಲಿ, ಅರ್ಜಿದಾರನಾಗಿರುತ್ತೇನೆ. ನನ್ನ ಮುಂದುವರೆದ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೆಚ್ಚುವರಿ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ಹೆಚ್ಚುವರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 17 | 4 ಔಷಧಿ ಚೀಟಿಗಳು (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ರಿಂದ 4 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 18 | 2 ಹೊರರೋಗಿ ಬಿಲ್ಲು |
| ನಿ.ಪಿ 19 | ಅಂಗನ್ಯೂನತೆಯ ಮೌಲ್ಯಮಾಪನ ವರದಿ |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀಸವಾಲುಃ</u> 2 ನೇ ಎದುರುದಾರರ ಪರ ಶ್ರೀ ವಿ ಎಸ್ ವಕೀಲರಿಂದಃ**

1. ನನಗೆ ಈಗ 43 ವರ್ಷ ವಯಸ್ಸು. ನಾಗರಬಾವಿಯಲ್ಲಿ ಈಗ ವಾಸವಾಗಿರುತ್ತೇನೆ. ಅಪಘಾತದ ಸಮಯದಲ್ಲಿ ನಾನು ತುಮಕೂರಿನಲ್ಲಿ ವಾಸವಾಗಿದ್ದೇನು. ನಾನು ತುಮಕೂರಿನಲ್ಲಿ ದೇಸಿ ಕೆಫೆ ಹೆಸರಿನಲ್ಲಿ ಕ್ಯಾಟರಿಂಗ್ ನಡೆಸುತ್ತಿದ್ದೇನು, ಈಗ ಯಾವುದಾದರೂ ಅರ್ಡರ್ ಗಳು ಇದ್ದರೆ ಹೋಗಿ ಬರುತ್ತೇನೆ. ಅಪಘಾತದ ದಿನದಂದು ನಾನು ಹೋಗುತ್ತಿದ್ದ ದ್ವಿಚಕ್ರ ವಾಹನ ನನಗೆ ಸೇರಿರುತ್ತದೆ. ಅಪಘಾತದ ದಿನದಂದು ಸದರಿ ದ್ವಿಚಕ್ರ ವಾಹನಕ್ಕೆ ಒ.ಡಿ. ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿ. ಅಪಘಾತದ ದಿನ ನನಗೆ ದ್ವಿಚಕ್ರ ವಾಹನ ಚಾಲನೇ ಮಾಡಲು ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ.

2. ಅಪಘಾತ ಪಡಿಸಿದ ವಾಹನ ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆ. ಅಪಘಾತದ ರಸ್ತೆಯ ಮಧ್ಯದಲ್ಲಿ ಬಿಳಿಪಟ್ಟಿ ಇರುವುದಿಲ್ಲ. ಪೊಲೀಸರು ತಯಾರಿಸಿರುವ ಕಚ್ಚಾ ನಕಾಶೆ ಸರಿಯಿದೆ.

ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಎಲ್ಲಾ ಕಡೆಗೂ ಜಖಂಗಳು ಆಗಿರುತ್ತವೆ, ಕಾರಣ ಅಪಘಾತದಿಂದಾಗಿ ನಾನು ಮತ್ತು ದ್ವಿಚಕ್ರ ವಾಹನ ಸೇರಿ ಮೋರಿಯಲ್ಲಿ ಬಿದ್ದಿರುತ್ತೇವೆ.

3. ದೂರನ್ನು ನನ್ನ ಪತ್ನಿ ನೀಡಿರುತ್ತಾರೆ. ನನ್ನ ಪತಿನ ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ಅಪಘಾತದ ನಂತರ ಎಂ ಸಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ. ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಆಗಿವೆ ಎಂದು ನಿಪಿ.5 ರಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ದಿನದಂದು ಎಂ ಸಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ನಾನು ಪ್ರಸ್ಟಿನ್ ಆಸ್ಪತ್ರೆಯಲ್ಲಿ 5 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ಸದರಿ ಆಸ್ಪತ್ರೆಯಲ್ಲಿ ನನಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ನನಗೆ ಶಸ್ತ್ರಚಿಕಿತ್ಸೆಯಾದ ಕುರಿತು ಪ್ರಸ್ಟಿನ್ ಆಸ್ಪತ್ರೆಯ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ್ಟಾರ್ ಹೆಲ್ತ್ ಆರೋಗ್ಯ ವಿಮಾ ಕಂಪನಿಗೆ ನನ್ನ ಮೂಲ ವೈದ್ಯಕೀಯ ದಾಖಲೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ನಾರಾಯಣ ಆಸ್ಪತ್ರೆಗೆ ಎದೆ ನೋವು ಬಂದಿದ್ದರಿಂದ ಹೋಗಿರುತ್ತೇನೆ. ನನಗೆ ಅಪಘಾತವಾದ ಒಂದು ವರ್ಷದ ನಂತರ ಎದೆ ನೋವು ಕಾಣಿಸಿರುತ್ತದೆ. ಅಪಘಾತದ ನಂತರ ನನಗೆ ಎದೆ ನೋವು, ಮಧುಮೇಹ ಮತ್ತು ಬೊಜ್ಜಿನ ಸಮಸ್ಯೆ ಇದೆ ಎಂದರೆ ಸರಿ. ನಿಪಿ.15 ರ ವೈದ್ಯಕೀಯ ಬಿಲ್ಲುಗಳು ಮಧುಮೇಹ, ಎದೆನೋವು ಮತ್ತು ಬೊಜ್ಜಿನ ಸಮಸ್ಯೆಗೆ ಪಡೆದ ಚಿಕಿತ್ಸೆಯ ಬಿಲ್ಲುಗಳು ಎಂದರೆ ಸರಿಯಲ್ಲ. ನಿಪಿ.15 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ಮುಂಗಡ ಪಾವತಿ ಹಣ ಅಂತಿಮ ಬಿಲ್ಲಿನಲ್ಲಿ ಒಳಗೊಂಡಿದೆ ಎಂದರೆ ಸರಿ.

5. ಅಪಘಾತದ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯ ಪ್ರತಿಯನ್ನು ಹಾಜರುಪಡಿಸಲಾಗುತ್ತದೆಯಾ ಎಂದರೆ ಸಲ್ಲಿಸಬಹುದು. ನನ್ನ ವೈದ್ಯಕೀಯಕ್ಕೆ ಒಟ್ಟಾಗಿ ರೂ.3,00,000/- ದಿಂದ 4,00,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಡುಪಿಯಲ್ಲಿ ಯೋಗ ಚಿಕಿತ್ಸೆಯನ್ನು ಪಡೆದುಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಜಖಂಗಳ ರಿಪೇರಿಗೆ ರೂ.30,000/- ಪರಿಹಾರವನ್ನು ಈ ಅರ್ಜಿಯಲ್ಲಿ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ಮುಖ್ಯ ವಿಚಾರಣಾ ಪ್ರಮಾಣದ ಕಂಡಿಕೆ 8 ರಲ್ಲಿ ಹೇಳಿರುವ ತೊಂದರೆಗಳು ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.19 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಿಪಿ.19 ನ್ನು ಡಾ. ಬಾಲಾಚಂದ್ರ, ಪ್ರಸ್ಟಿನ್ ಆಸ್ಪತ್ರೆಯವರು ನೀಡಿರುತ್ತಾರೆ. ನಿಪಿ.19 ನ್ನು ನನ್ನ ಕಾಲಿನ ನೋವಿಗೆ ಸಂಬಂಧಿಸಿದಂತೆ ನೀಡಿರುತ್ತೇನೆ. ನನಗೆ ಬೇರೆ ಖಾಯಿಲೆಗಳಿಂದ ಸುಸ್ತಾಗುತ್ತಿದ್ದು ಅಪಘಾತದಿಂದಾದ ಗಾಯಗಳಿಂದಲ್ಲ ಎಂದರೆ ಸರಿಯಲ್ಲ. ನಿಪಿ.19 ನ್ನು ನೀಡಿದವರ ಸಾಕ್ಷ್ಯ ಮಾಡಿಸುತ್ತೀರಾ ಎಂದರೆ ಅವರನ್ನು ವಿಚಾರಿಸಿ ಹೇಳುತ್ತೇನೆ. ನಾನು ಈಗ ಆರೋಗ್ಯವಾಗಿದ್ದು ಮೊದಲಿನಂತೆ ಕೆಲಸ ಮಾಡಿಕೊಂಡು ಇದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಒಂದನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು. ಈ ಕಾರಣದಿಂದ ಅವರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು-ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**